- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಇವರು ವಿಶ್ವ ಯೋಜನೆಯಡಿಯಲ್ಲಿ ನಿರ್ಮಿಸಿರುವಂತಹ ಕಾರ್ಯಗಾರಗಳನ್ನು ಉಣ್ಣೆ ನೇಕಾರರಿಗೆ ವರ್ಗಾಯಿಸುವುದು ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಇವುಗಳನ್ನು ಬಳಸಿಕೊಳ್ಳುವುದು.
- ಮುಂದಿನ ಐದು ವರ್ಷಗಳಲ್ಲಿ ಗದಗ್, ಕೈಮಗ್ಗ ತರಬೇತಿ ಕೇಂದ್ರ ಮತ್ತು ಜಮಖಂಡಿಯಲ್ಲಿ ಕೈಮಗ್ಗ ಕೇಂದ್ರ ಇವುಗಳ ಆವೃತ್ತ ವೆಚ್ಚ ಭರಿಸಲು ಪ್ರತೀ ವರ್ಷ ಕ್ರಮವಾಗಿ ರೂ. 40.00 ಲಕ್ಷ ಹಾಗೂ ರೂ. 32.00 ಲಕ್ಷಗಳ ಅನುದಾನ ನೀಡುವುದು.
- ಸಹಕಾರಿ ಸಂಸ್ಥೆಗಳು, ಕಾವೇರಿ ಹ್ಯಾಂಡ್‌ಲೂಮ್ಸ್ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಇವುಗಳ ಹಳೆಯ ದಾಸ್ತಾನುಗಳ ವಿಲೇವಾರಿ ಮಾಡಿದ ಶೇಕಡ 20 ರ ಪ್ರೋತ್ಸಾಹಧನ ನೀಡುವುದು.
- ದೊಡ್ಡಬಳ್ಳಾಪುರ, ಬೆಳಗಾವಿ, ದಾವಣಗೆರೆ ಹಾಗು ಗದಗ್ ನಗರಗಳಲ್ಲಿ ಕೇಂದ್ರೀಯ ಯೋಜನೆಗಳಾದ ಟಿ.ಸಿ.ಐ.ಡಿ.ಎಸ್. ಗುಂಪು ಕಾರ್ಯಗಾರ ಯೋಜನೆ ಮತ್ತು ಟಿ.ಯು.ಎಫ್.ಎಸ್. ಸಮನ್ವಯದೊಂದಿಗೆ ಸ್ಥಾಪಿಸಲು ಬೇಕಾಗುವ ಭೂಮಿಯ ವೆಚ್ಚವನ್ನು ರಾಜ್ಯ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿ/ನೇಕಾರರ ವತಿಯಿಂದ 75:25 ಅನುಪಾತದಲ್ಲಿ ಭರಿಸುವುದು.
- ನಾಲ್ಕು ವಿದ್ಯುತ್ ಮಗ್ಗಗಳಿಂದ ಹೆಚ್ಚಿಗೆ ಇರದ ಹಾಗೂ ಐದು ಹೆಚ್.ಪಿ.ಗಿಂತ ಹೆಚ್ಚಿನ ವಿದ್ಯುತ್ ಸೌಲಭ್ಯ ಹೊಂದಿರದ ವಿದ್ಯುತ್ ಚಾಲಿತ ಮಗ್ಗಗಳಿಗೆ ಉಪಯೋಗಿಸುವ ವಿದ್ಯುತ್‌ಚ್ಛಕ್ತಿಯ ಶೇಕಡ 50 ರಷ್ಟು ವಿದ್ಯುತ್ ಸಬ್ಸಿಡಿ ಅಥವಾ ಪ್ರತೀ ವಿದ್ಯುತ್ ಮಗ್ಗಕ್ಕೆ ಮಾಸಿಕವಾಗಿ ರೂ. 200.00 ಇವುಗಳಲ್ಲಿ ಯಾವುದು ಕಡಿಮೆಯೇ ಅದನ್ನು ಸರ್ಕಾರ ಭರಿಸುವುದು.
- ಸರ್ಕಾರದ ವಿವಿಧ ಇಲಾಖೆಸಾರ್ವಜನಿಕ ವಲಯ ಉದ್ದಿಮೆಗಳಿಗೆ ಬೇಕಾಗುವ ಬಟ್ಟೆಯನ್ನು ಖರೀದಿಸುವುದನ್ನು ನಿರ್ಧರಿಸಲು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸುವುದು.
- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಆರ್ಥಿಕ ಪುನರ್‌ರಚನೆ ಹಾಗೂ ಪುನಶ್ಚೇತನ (ಸ್ವಯಂ ನಿವೃತ್ತಿ ಯೋಜನೆ, ಮಾರ್ಜಿನ್ ಹಣ ಹಾಗೂ ಶೇರು ಬಂಡವಾಳ ಪರಿವರ್ತನೆ ಇತ್ಯಾದಿ)

ಉದ್ಯೋಗ ನಿಧಿ ಸ್ಥಾಪಿಸುವ ಬಗ್ಗೆ

162(365) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು.(ಶಿವಾಜಿನಗರ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗುಡಿ ಹಾಗೂ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಮುಂದೆ ಬರುವ ಗ್ರಾಮೀಣ ಯುವಕರಿಗೆ ಮಂಜೂರಾತಿಯಾಗಿರುವ ಯೋಜನೆಗಳ ಪ್ರಾಯೋಜಕರ ಪಾಲಿನ ಶೇ 20 ರಷ್ಟು ಮೊತ್ತವನ್ನು ಸರ್ಕಾರವೇ ಭರಿಸುವ ಉದ್ಯೋಗ ನಿಧಿ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ ;

ಅ) ಇದಕ್ಕಾಗಿ ನಿಗದಿ ಮಾಡಿರುವ ಹಣವೆಷ್ಟು ;

ಇ) ಎಂದಿನಿಂದ ಅದು ಜಾರಿಗೆ ಬರಲಿದೆ ;

ಈ) ಉದ್ಯೋಗ ನಿಧಿ ಸ್ಥಾಪಿಸದಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಅಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಈ ಯೋಜನೆಯನ್ನು ಈ ಇಲಾಖೆಯಲ್ಲಿ ಅನುಷ್ಠಾನಗೊಳ್ಳದಿರುವ ಕಾರಣ ಯಾವುದೇ ರೀತಿಯ ಆಯವ್ಯಯ ಹಂಚಿಕೆ ಮಾಡಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಕಾರ್ಖಾನೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ

163(325) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬಹ್ಮಾವರ) : ಮಾನ್ಯ ಭಾರಿ ಮತ್ತು ಮಧ್ಯಮ, ಸಣ್ಣ ಕೈಗಾರಿಕೆ ಮೂಲ ಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ಕಾರ್ಖಾನೆಯಲ್ಲಿ ಉನ್ನತ ಅಧಿಕಾರಿಗಳ ಭ್ರಷ್ಟಾಚಾರ : ಅಕ್ರಮ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ ಇಂತಹ ಎಷ್ಟು ಪ್ರಕರಣಗಳನ್ನು ಗುರುತಿಸಲಾಗಿದೆ ಹಾಗೂ ದುರುಪಯೋಗವಾದ ಮೊತ್ತವೆಷ್ಟು (ವಿವರ ನೀಡುವುದು) ;

ಇ) ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು ? (ವಿವರ ನೀಡುವುದು) ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಅಭಿವೃದ್ಧಿ ಸಚಿವರು) :

ಅ) ಹೌದು ಬಂದಿರುತ್ತದೆ.

ಆ) ಹಲವು ಪ್ರಕರಣಗಳು ಸಾಮಾನ್ಯ ಸಾರ್ವಜನಿಕ : ಟ್ರೇಡ್ ಯೂನಿಯನ್‌ರವರಿಂದ ಸಲ್ಲಿಸಲ್ಪಟ್ಟಿರುತ್ತವೆ. ಸದರಿ ಪ್ರಕರಣಗಳ ಪಟ್ಟಿಯನ್ನು ಲಗತ್ತಿಸಲಾಗಿದೆ. ವಿಚಾರಣೆಯು ಮಾನ್ಯ ಲೋಕಾಯುಕ್ತರವರ ಅಧೀನದಲ್ಲಿರುತ್ತದೆ.

ಸದರಿ ಪ್ರಕರಣಗಳ ವಿಚಾರಣೆಯು ಲೋಕಾಯುಕ್ತರವರ ಕಛೇರಿಯಲ್ಲಿ ಬಾಕಿಯಿರುವುದರಿಂದ ದುರುಪಯೋಗವಾದ ಮೊತ್ತದ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ.

ಇ) ಮಾನ್ಯ ಲೋಕಾಯುಕ್ತರಿಂದ ವರದಿಯನ್ನು ನಿರೀಕ್ಷಿಸಲಾಗಿದ್ದು, ವರದಿ ಬಂದ ನಂತರ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಾನೂನಿನ ರೀತ್ಯಾ ಲೋಕಾಯುಕ್ತರ ಆದೇಶ ಅನುಸರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.